ಶ್ರೀ ಲಕ್ಷ್ಮಣ ಸವದಿ :– ನಾನು ಕಾನೂನಿನ ಚೌಕಟ್ಟಿನಲ್ಲಿ ಅದರ ಬಗ್ಗೆ ಏನು ಪರಿಶೀಲನೆ ಮಾಡಬೇಕಾಗಿದೆಯೋ, ಅದನ್ನು ಪರಿಶೀಲನೆ ನಡೆಸುತ್ತೇನೆ. ಪರಿಶೀಲನೆ ನಡೆಸಿ ವರದಿ ಬಂದ ಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಹಾಲಕ್ಷ್ಮಿ ಲೇಔಟ್ ಕ್ಷೇತ್ರ ವ್ಯಾಪ್ತಿಯ ಬಿಪಿಎಲ್ ಕಾರ್ಡ್ ಫಲಾನುಭವಿಗಳ ಬಗ್ಗೆ

61(398) ಶ್ರೀ ಎನ್.ಎಲ್.ನರೇಂದ್ರ ಬಾಬು (ಮಹಾಲಕ್ಷ್ಮಿ)

ಶ್ರೀ ಹೆಚ್. ಹಾಲಪ್ಪ. (ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

1) ಮಹಾಲಕ್ಷ್ಮಿ ಬಡಾವಣೆ ವಿಧಾನ ಸಭಾ ಕ್ಷೇತ್ರದಲ್ಲಿ ಗುರುತಿಸಲಾದ ಬಿಪಿಎಲ್ ಕಾರ್ಡು ಫಲಾನುಭವಿಗಳ ಒಟ್ಟು ಸಂಖ್ಯೆ ಎಷ್ಟು;

ಹಾಲಿ13,158 ಬಿಪಿಎಲ್ ಪಡಿತರ ಚೀಟಿಗಳು (1,244 ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು ಸೇರಿಸಿ) ಚಾಲ್ತಿಯಲ್ಲಿರುತ್ತವೆ. ಇದಲ್ಲದೆ 5,588 ಬಿಪಿಎಲ್ ಫಲಾನುಭವಿಗಳನ್ನು ಹೊಸದಾಗಿ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ.

2) ಈ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಪೂರ್ಣಗೊಂಡಿದೆಯೇ;

ಹೌದು

3) ಈ ಕ್ಷೇತ್ರದಲ್ಲಿ ಫಲಾನುಭವಿಗಳಿಗೆ ನೀಡಿದ ಬಿಪಿಎಲ್ ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು; (ಕುಟುಂಬಗಳ ಸಂಪೂರ್ಣ ವಿಳಾಸ ಒದಗಿಸುವುದು)

ಹಾಲಿ 13,158 ಬಿಪಿಎಲ್ ಪಡಿತರ ಚೀಟಿಗಳು (1,244 ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು ಸೇರಿಸಿ) ಚಾಲ್ತಿಯಲ್ಲಿರುತ್ತವೆ. ಇದಲ್ಲದೆ 5,588 ಬಿಪಿಎಲ್ ಫಲಾನುಭವಿಗಳನ್ನು ಹೊಸದಾಗಿ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ. (ಮಾನ್ಯ ಸದಸ್ಯರಿಗೆ ಮಾಹಿತಿಯನ್ನು CD ಯಲ್ಲಿ ಒದಗಿಸಲಾಗಿದೆ)

4) ಬಿಪಿಎಲ್ ಕಾರ್ಡುಗಳ ನೀಡಿಕೆಯಲ್ಲಿ ಅನುಚಿತ ವಿಳಂಬವಾಗಿರುವುದು ನಿಜವೇ;

ಸ್ವಲ್ಪ ವಿಳಂಬವಾಗಿರುವುದು ನಿಜ. ಆದರೆ ಅನುಚಿತ ವಿಳಂಬವಾಗಿರುವುದಿಲ್ಲ.

5) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಅನ್ವಯಿಸುವುದಿಲ್ಲ.

6) ಬಿಪಿಎಲ್ ಕಾರ್ಡುಗಳನ್ನು ನೀಡುವ ಪ್ರಕ್ರಿಯೆ ಯಾವಾಗ ಮುಗಿಯುತ್ತದೆ?

ಇದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಶ್ರೀ ನೆ.ಲ.ನರೇಂದ್ರಬಾಬು :– ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ ಶಾಸಕ ಆಗಿದ್ದಾಗಿನಿಂದ ನೋಡುತ್ತಿದ್ದೇನೆ. ಈ ಪ್ರಶ್ನೆಗೆ ಪ್ರತಿಯೊಂದು ಸಲವೂ ಇದೇ

ರೀತಿಯ ಉತ್ತರ ಬರುತ್ತಿದೆ. ಹಾವು ಆಡಿಸುವವರು, ಹಾವು–ಮುಂಗಸಿಯನ್ನು ಜಗಳಕ್ಕೆ ಬಿಡುತ್ತೇನೆಂದು ಹೇಳಿ ಎಲ್ಲರ ಬಳಿ ದುಡ್ಡು ಕಲೆಕ್ಟ್ ಮಾಡುತ್ತಿರುತ್ತಾರೆ. ಹಾವು ಮುಂಗಸಿಯನ್ನು ಜಗಳಕ್ಕೆ ಬಿಡುತ್ತೇನೆಂದು ಹೇಳಿ ಎಲ್ಲರ ಹತ್ತಿರ ಹಣವನ್ನು ಸಂಗ್ರಹಿಸಿ, ಕೊನೆಗೆ ಹಾವನ್ನು ಒಂದು ಕಡೆ, ಮುಂಗಸಿಯನ್ನು ಒಂದು ಕಡೆ ಇಟ್ಟುಕೊಂಡು ಆಟ ಮುಗಿದ ಮೇಲೆ ಹೋಗುತ್ತಿರುತ್ತಾನೆ, ಈ ರೀತಿಯಾಗುತ್ತದೆ. ಇವತ್ತು ಬೆಂಗಳೂರು ನಗರದಲ್ಲಿರುವ ಬಡವರ ಬವಣೆ ಏಕೆ ಸರ್ಕಾರದ ಗಮನಕ್ಕೆ ಬರುತ್ತಿಲ್ಲವೊ ಗೊತ್ತಾಗುತ್ತಿಲ್ಲ. ಪ್ರಶ್ನೆ ಸಂಖ್ಯೆ 1ರಲ್ಲಿ ಹೇಳಿದಂತೆ, 13,158 ಬಿಪಿಎಲ್ ಕಾರ್ಡುಗಳಿವೆ ಎಂದು ಹೇಳಿದೀರಿ, ಎಷ್ಟು ಅರ್ಜಿಗಳು ಬಂದಿದ್ದಾವೆ ಎಂಬುದನ್ನು ತಿಳಿಸಬೇಕು. ಈ ಒಂದು ಸಿ.ಡಿ.ಯನ್ನು ಒದಗಿಸಿಕೊಟ್ಟಿದ್ದೀರಿ, ಮುಂದಿನ ಅಧಿವೇಶನಗಳಲ್ಲಿ ನಾವು laptop ಗಳನ್ನು ನಾವು ಉಪಯೋಗ ಮಾಡಿಕೊಂಡು verify ಮಾಡುವುದಕ್ಕೆ ತಾವು ಅವಕಾಶ ಕೊಡುವುದಾದರೆ, ನಾವು laptop ಗಳನ್ನು ಇಟ್ಟುಕೊಂಡು ಪ್ರಶ್ನೆಗಳಿಗೆ ನೀವು ಉತ್ತರವನ್ನು ಸಿ.ಡಿ.ಯಲ್ಲಿ ನೋಡುವುದಕ್ಕೆ ತಾವು ಹೇಳಬೇಕು. ಪ್ರತಿಯೊಂದು ಸಭೆಯಲ್ಲಿ ಹೇಳಿದ್ದು old age pension, widow pension, Physically handicapped pension ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆತೆಗೆದುಕೊಳ್ಳಲು ಬಿಪಿಎಲ್ ಕಾರ್ಡುಗಳನ್ನು ಕೇಳುತ್ತಾರೆ. ಬೆಂಗಳೂರು ನಗರದಲ್ಲಿ ಬಡತನರೇಖೆಗಿಂತ ಕೆಳಗಿರುವ ಮತ್ತು ಅಸಂಘಟಿತ ಕಾರ್ಮಿಕ ವರ್ಗ ಬಹಳಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಬಿಪಿಎಲ್ ಕಾರ್ಡ್ ಇನ್ಸಿಸ್ಟ್ ಮಾಡುವುದನ್ನು ನಿಲ್ಲಿಸಿದ್ದೀರಾ ಇಲ್ಲವೇ ಎಂಬುದನ್ನು ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಇವತ್ತು ಕಡ್ಡಾಯವಾಗಿ ಬಿಪಿಎಲ್ ಕಾರ್ಡ್‌ಗಳನ್ನು ಕೇಳುತ್ತಿದ್ದಾರೆ. ನೀವು ಕೊಟ್ಟಿರುವ ಉತ್ತರದ ಕೊನೆಯಲ್ಲಿ ಈ ಪ್ರಕ್ರಿಯೆ ಮುಂದುವರೆಯುತ್ತದೆಂದು ಹೇಳಿದ್ದೀರಿ, ಆದರೆ ಅರ್ಜಿ ತೆಗೆದುಕೊಳ್ಳುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. 2 ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದೀರಿ. ಇದನ್ನು ಯಾವಾಗಿನಿಂದ ಕೊಡುತ್ತೀರಾ? ಯಾವಾಗ ಬಡವರಿಗೆ ಮುಕ್ತಿಯನ್ನು ಕೊಡುತ್ತಿರೆಂಬುದನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ನೀವು ಬಯೋಮೆಟ್ರಿಕ್ ಅನ್ನು ಜಾರಿಗೆ ತರುವುದರಿಂದ ಡೂಪ್ಲಿಕೇಷನ್ ಆಗುವುದಕ್ಕೆ, ಒಂದೇ ಕುಟುಂಬದವರು ಎರಡೆರಡು ಕಡೆ ಕಾರ್ಡು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಪ್ರಕ್ರಿಯೆಯನ್ನು ಯಾವ ಏಜೆನ್ಸಿಗೆ ವಹಿಸಿ ಕೊಟ್ಟಿದ್ದೀರಾ? ಇವರು ಎಷ್ಟು ವರ್ಷಗಳಿಂದ ಈ ಪ್ರಕ್ರಿಯೆಯನ್ನು ಮಾಡುತ್ತಲೇ ! ಇದ್ದಾರೆ, ಎಷ್ಟು ಕೋಟಿ ರೂಪಾಯಿಗಳಿಗೆ ಇವರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದೀರಾ ಎಂಬುದನ್ನು ಸಚಿವರು ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಹಾಲಪ್ಪ :– ಮಾನ್ಯ ಸದಸ್ಯರು, ತಮ್ಮ ಕ್ಷೇತ್ರದಲ್ಲಿ ಎಷ್ಟು ಅರ್ಜಿಗಳು ಬಂದಿದ್ದಾವೆಂದು ಉಪ ಪ್ರಶ್ನೆಯನ್ನು ಕೇಳಿದರು, 24,957 ಅರ್ಜಿಗಳು ಬಂದಿದ್ದವು. ಹೊಸದಾಗಿ ಬಂದ ಅರ್ಜಿಗಳಲ್ಲಿ 5,588 BPL ಕಾರ್ಡುಗಳನ್ನು

ಗುರುತಿಸಿ ಅವರಿಗೆ ಕೊಡಲಾಗುತ್ತದೆ. ಇನ್ನು ಸಿ.ಡಿ. ಬಗ್ಗೆ ಹೇಳಿದ್ದೀರಿ, 13 ಸಾವಿರ ಕುಟುಂಬಗಳ ವಿಳಾಸ ಕೊಡುವುದಾದರೆ ಬಹಳ ದೊಡ್ಡ ಪುಸ್ತಕವಾಗುತ್ತದೆಂದು ಅದಕ್ಕಾಗಿ ನಾವು ಒಂದು ಸಿ.ಡಿ.ಯನ್ನು ಕೊಟ್ಟಿದ್ದೇವೆ, ಮತ್ತೆ ನಿಮಗೆ ಸಿ.ಡಿ laptop ಕೊಡುವ ಉದ್ದೇಶ ನಮಗಿಲ್ಲ. ಮತ್ತೆ ಹಾವಾಡಿಗರ ಬಗ್ಗೆ ಎಲ್ಲಾ ಹೇಳಿದಿರಿ, ತಾವೆಲ್ಲಾ ಸಿನಿಮಾದಲ್ಲೆಲ್ಲಾ ಇರುವವರು ಹಾವಾಡಿಗರೆಲ್ಲಾ ನಿಮಗೇ ಗೊತ್ತು ನಾನು ಹೇಗೆ ಹೇಳಲಿ, ಸಿನಿಮಾದವರೆಂದರೆ ಬೇರೆ ಅರ್ಥ ಕಲ್ಪಿಸುವುದು ಬೇಡ, ನಿಮ್ಮ ಬಗ್ಗೆ ಗೌರವವಿದೆ. ಕಾಮೆಟ್ ಎನ್ನುವ ಒಂದು ಸಂಸ್ಥೆಗೆ ಹಿಂದಿನವರೇ ಕಾಂಟ್ರ್ಯಾಕ್ಟ್ ಕೊಟ್ಟಿದ್ದಾರೆ, ತಮಗೆ ಕೆಲಸ ನಡೆಯುತ್ತಿರುವುದು ಗೊತ್ತಿದೆ, ಹೆಚ್ಚಿನ ಉಪಪ್ರಶ್ನೆಗಳೇನಾದರೂ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಲ್.ಎನ್.ನರೇಂದ್ರ ಬಾಬು :– ಅದು ಧೂಮಕೇತುವೊ ಕಾಮೆಟ್ಟೊ ಗೊತ್ತಾಗಲಿಲ್ಲ. ಹೇಗಾಗಿದೆ ಎಂದರೆ, ಕಳೆದ 4 ವರ್ಷಗಳಿಂದ ಬಹುಶಃ ಈ ಪ್ರಕ್ರಿಯೆ ನಡೆಯುತ್ತಲೇ ಇದೆ. ನಾನು ತಮಗೆ ಹೇಳಿದ್ದೇನೆಂದರೆ, ನಾವು ಚಿಕ್ಕವರಾಗಿದ್ದಾಗ ಹಾವಾಡಿಸುವುದನ್ನು ನೋಡುತ್ತಿರುವಾಗ, ಹಾವು, ಮುಂಗಸಿಗೆ ಜಗಳ ಬಿಡುತ್ತೇವೆಂದು ಹೇಳಿ ಕೊನೆಗೆ ಕಾಸು ಕಲೆಕ್ಟ್ ಮಾಡಿಕೊಂಡು ಹೋಗಿಬಿಡುತ್ತಾರೆ. ಹಾಗೆ ರೂ.45/– ಕಲೆಕ್ಟ್ ಮಾಡಿದ್ದಾರೆ, ಬೆಳಿಗ್ಗೆ ಡಿಡಿಯವರನ್ನು ಕೇಳಿದಾಗ, ತಾತ್ಕಾಲಿಕ ಕಾರ್ಡಿಗೆ ರೂ.5 ಕೊಡಬೇಕೆಂದರು, ಮತ್ತೆ ರೂ.50/– ಆಯಿತು, ಮತ್ತೆ ಕಾರ್ಡ್ ನವೀಕರಣ ಮಾಡುವಾಗ ಹಣವನ್ನೇನಾದರೂ ಕಲೆಕ್ಟ್ ಮಾಡುತ್ತಾರಾ ಎಂಬುದು ಸರ್ಕಾರದಿಂದ ಗೊತ್ತಾಗಬೇಕು. ನಾನು ಆಗಲೇ ಉಪ ಪ್ರಶ್ನೆಯನ್ನು ಕೇಳಿದೆ, ರೂ.2 ಕೆ.ಜಿ ಅಕ್ಕಿಯನ್ನು ಯಾವಾಗಿನಿಂದ ಕೊಡುತ್ತೀರಿ ಸ್ವಾಮಿ? ಬಡವರಿಗೆ ಬಿಪಿಎಲ್ ಕಾರ್ಡ್ ಏತಕ್ಕೆ ಬೇಕೆಂದರೆ, ಪ್ರತಿನಿತ್ಯ ಸರ್ಕಾರದಿಂದ ಒಂದು ಸವಲತ್ತು ಪಡೆಯಬೇಕಾದರೆ ಬಿಪಿಎಲ್ ಕಾರ್ಡ್ ಅನ್ನು ಇನ್ಸಿನ್ಟ್ ಮಾಡುತ್ತಾರೆ, ಎಲ್ಲಾ ಶಾಸಕರಿಗೂ ಈ ಸಮಸ್ಯೆ ಇದೆ. ನಗರದಲ್ಲಂತೂ ನಮಗೆ ವಿಕ್ಟೋರಿಯ, ಕೆ.ಸಿ.ಜನರಲ್, ನಿಮಾನ್ಸ್, ಬೌರಿಂಗ್ ಆಸ್ಪತ್ರೆಗಳಿಗೆ ಹೋಗಲಿ, ಎಲ್ಲಿ ಹೋದರೂ ಇದನ್ನು ಇನ್ಸಿಸ್ಟ್ ಮಾಡುತ್ತಾರೆ. ದಯವಿಟ್ಟು ಸರ್ಕಾರ ಸ್ಪಷ್ಟೀಕರಣ ಕೊಡಬೇಕು, ಸರ್ಕಾರ, ದಯವಿಟ್ಟು ನಿಲ್ಲಿಸಿ, ಬಡತನರೇಖೆಗಿಂತ ಕೆಳಗಿರುವವರನ್ನು ಯಾವ ಮಾನದಂಡವನ್ನಿಟ್ಟುಕೊಂಡು ನಿಗದಿ ಮಾಡುತ್ತೀರಿ, ನೀವು ಬಿಪಿಎಲ್ ಕಾರ್ಡ್ ಕೊಡುವುದಿಲ್ಲ, ಆ ಬಡಜನ ಹೋಗಿ ಪರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ದಯವಿಟ್ಟು ಈ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ. ಯಾವಾಗಿನಿಂದ ನಮ್ಮ ಕ್ಷೇತ್ರದಲ್ಲಿ ಬಿಪಿಎಲ್ ಕಾರ್ಡ್ ಕೊಡುವುದಕ್ಕೆ ಆರಂಭಿಸುತ್ತೀರಾ ಎಂಬ ಬಗ್ಗೆ ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಹಾಲಪ್ಪ :– ಚುನಾವಣಾ ಪ್ರಣಾಳಿಕೆಯಲ್ಲಿ 2 ರೂ. ಗೆ ಒಂದು ಕೆ.ಜಿ ಅಕ್ಕಿ ಕೊಡುವುದಿತ್ತು ಎಂದು ಹೇಳಿದರು, ನಮಗೆ ಇನ್ನು ನಾಲ್ಕು ವರ್ಷಗಳ ಅಧಿಕಾರಾವಧಿ ಇದೆ. ಮುಂದೆ ಸರ್ಕಾರ ಅದನ್ನು ಪರಿಶೀಲಿಸುತ್ತದೆ. ರೇಷನ್ purposeಗೆ ಮಾತ್ರ ರೇಷನ್ ಕಾರ್ಡ್‌ನ್ನು ಉಪಯೋಗ

ಮಾಡಬೇಕೆನ್ನುವುದು ನಮ್ಮ ಇಲಾಖೆಯ ಉದ್ದೇಶ. ಆದರೂ ಅದನ್ನು ಬೇರೆ ಇಲಾಖೆಗಳಲ್ಲಿ ಕೇಳುತ್ತಿದ್ದಾರೆಂಬುದನ್ನು ನಾವು ಕೇಳಿದ್ದೇವೆ ಮತ್ತು ನಮ್ಮ ಗಮನಕ್ಕೂ ಬಂದಿದೆ. ಆ ಕಾರಣಕ್ಕಾಗಿ ಬಿಪಿಎಲ್ ಕಾರ್ಡಿಗಾಗಿ ಹಾಹಾಕಾರ. ಮೊದಲು ಸೈಕಲ್‌ಗಾಗಿ ಕೇಳಿದರು, ಆಮೇಲೆ ಗಂಗಾ ಕಲ್ಯಾಣಕ್ಕೆ ಕೇಳುತ್ತಾರೆ, ಆಸ್ಪತ್ರೆಗಳಲ್ಲಿ ಕೇಳುತ್ತಾರೆ, ಆ ಕಾರಣಕ್ಕಾಗಿ ಇಷ್ಟೊಂದು ಒತ್ತಡವೆಂದು ಸರ್ಕಾರದ ಗಮನಕ್ಕೂ ಬಂದಿದೆ, ಅದನ್ನು ಮುಂದಿನ ದಿವಸಗಳಲ್ಲಿ ಪರಿಶೀಲಿಸುತ್ತೇವೆ.

ಶ್ರೀ ಎನ್.ಎಲ್.ನರೇಂದ್ರಬಾಬು :– ಬೆಂಗಳೂರು ನಗರದ ಶಾಸಕರ ಸಭೆಯನ್ನು ವಿಶೇಷವಾಗಿ ಕರೆಯುತ್ತೇವೆಂದು ಹೇಳಿದಿರಿ, ಕರೆದಿಲ್ಲ. ಆಗಿರುವುದನ್ನು ಕೊಡುವ ಪ್ರಕ್ರಿಯೆ ಚಾಲನೆ ಮಾಡಿ, ಇವತ್ತಿನಿಂದ ಮಾಡುತ್ತೀರೋ, ನಾಳೆ ಮಾಡುತ್ತೀರೊ, ಚುನಾವಣೆ ಕೋಡ್ ಆಫ್ ಕಾಂಡಕ್ಟ್ ಬಂದರೆ ಮತ್ತೆ ಸಮಸ್ಯೆಯಾಗುತ್ತದೆ, ದಯವಿಟ್ಟು ನಿಮ್ಮ ಕಾಲದಲ್ಲಾದರೂ ಮಾಡಿ.

ಅಧ್ಯಕ್ಷರು :– ಸಭೆಯನ್ನು ಕರೆಯಿರಿ.

ಶ್ರೀ ಹೆಚ್.ಹಾಲಪ್ಪ :– ಅಧ್ಯಕ್ಷರೆ, ಖೋಡಿತಾ ಮಾಡುತ್ತೇವೆ, ಈಗ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ, ನಮ್ಮ ಅಧಿಕಾರಿಗಳನ್ನು ಕರೆಯಿಸಿ ಅವರ ಗಮನಕ್ಕೆ ಇದನ್ನು ತರುತ್ತೇವೆ, ಪ್ರಕ್ರಯೆ ನಡೆಯುತ್ತಿದೆ. ತಮ್ಮ ಕ್ಷೇತ್ರದ ಪಾಲಿಗೆ 5,588 ಕಾರ್ಡುಗಳೇನು ಬಂದಿವೆ, ಅವನ್ನು ಈ ಕ್ಷಣದಲ್ಲೇ ತಾವು ಕೊಡಬಹುದು, ಈ ಬಗ್ಗೆ ನಮ್ಮ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಎನ್.ಎಲ್.ನರೇಂದ್ರಬಾಬು :– ಅರ್ಜಿ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತದೆಯೇ? ಅಪ್ಲಿಕೇಷನ್ ತೆಗೆದುಕೊಳ್ಳುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ.

ಶ್ರೀ ಹೆಚ್.ಹಾಲಪ್ಪ :– ಇದು ನಿರಂತರವಾಗಿ ನಡೆಯುವಂಥದ್ದು.

ಅಧ್ಯಕ್ಷರು :– ನರೇಂದ್ರ ಬಾಬುರವರೆ, ನಿರಂತರವಾಗಿ 8–10 ವರ್ಷದಿಂದ ನಡೆಯುತ್ತಿದೆ.

ಶ್ರೀ ಯು.ಟಿ.ಖಾದರ್ :– ಅಧ್ಯಕ್ಷರೆ, ಗ್ಯಾಸ್ ಇದ್ದವರಿಗೆ 2 ಲೀಟರ್ ಸೀಮೆ ಎಣ್ಣೆ ಕೊಡಲಾಗುವುದೆಂದು ಹೇಳಿದ್ದಾರೆ, ಎಲ್ಲಿಯೂ ಕೂಡ ಸಿಗುತ್ತಿಲ್ಲ.

ಶ್ರೀ ಹೆಚ್.ಹಾಲಪ್ಪ :– ಹಿಂದೆ ಆ ಬೇಡಿಕೆಯನ್ನು ಇಟ್ಟಿದ್ದರು, ಪರಿಶೀಲಿಸುತ್ತೇವೆಂದು ಹೇಳಿದ್ದೆವು, ಆದರೆ ಇತ್ತೀಚಿನ ಅಧ್ಯಯನದಿಂದ ಅದು ಸಾಧ್ಯವಿಲ್ಲವೆಂಬುದು ಗೊತ್ತಾಗಿದೆ.

ಶ್ರೀ ಯು.ಟಿ.ಖಾದರ್ :– ಹಾಗಾದರೆ ಕೊಡುವುದಿಲ್ಲವೇ?

ಶ್ರೀ ಹೆಚ್.ಹಾಲಪ್ಪ :– ಇಲ್ಲ.

ಉಡುಪಿಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ರಚನೆಯ ಬಗ್ಗೆ.

62(405) ಶ್ರೀ ರಘುಪತಿ ಭಟ್ ಕೆ. (ಉಡುಪಿ)